<u>ದಿನಾಂಕ: **03-03-2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲು: ಶ್ರೀ ಹೆಚ್.ಎಂ.ಎಸ್.ಎನ್. ವಕೀಲರಿಂದ ವಾದಿಗಳ ಪರವಾಗಿ:</u>

**12.** ಯತ್ತಪ್ಪ, ಚಿತ್ರಲಿಂಗ, ಈರನಾಗಮ್ಮ ಹಾಗೂ ಕದರಿ ನರಸಿಂಹ ದೇವರುಗಳಿಗೆ ನರಸಿಂಹಮೂರ್ತಿ ಎಂಬುವವರು ಪೂಜಾರಿಯಾಗಿದ್ದಾರೆ. ಅದೇ ರೀತಿ ಕುರುಬ ಜನಾಂಗಕ್ಕೆ ಸೇರಿದ ಬೀರಲಿಂಗಸ್ವಾಮಿ, ಮಾಊರದಮ್ಮ, ತಿಮ್ಮಪ್ಪ ಮತ್ತು ಹಳ್ಳಿಕಾರ್ ಜನಾಂಗದ ಕಾಟಮ್ಮಲಿಂಗೇಶ್ವರ, ಚಿಕ್ಕಲಕ್ಕಮ್ಮ, ದೊಡ್ಡಲಕ್ಕಮ್ಮ ಹಾಗೂ ಮಡಿವಾಳ ಜನಾಂಗದ ಪಾಥಲಿಂಗೇಶ್ವರ, ಆದಿ ಕರ್ನಾಟಕ ಜನಾಂಗದ ಬೇವಿನ ಹಲ್ಲಮ್ಮ, ಲಕ್ಷ್ಮೀದೇವಿ, ಗಲ್ಲೇಮಾರಮ್ಮ ಮತ್ತು ಮೈಲಾರಲಿಂಗೇಶ್ವರ ಹಾಗೂ ಚಲುವಾದಿ ಸಮುದಾಯಕ್ಕೆ ಸೇರಿದ ಮೈಲಾರಲಿಂಗೇಶ್ವರ ಮತ್ತು ಮಾರಮ್ಮ ಈ ದೇವಸ್ಥಾನಗಳ ಪೂಜಾರಿಗಳು ಯಾರೆಂದು ಗೊತ್ತಿಲ್ಲ. ಗ್ರಾಮ ದೇವತೆಗಳಾದ ಈಶ್ವರ ದೇವಸ್ಥಾನದ ಪೂಜಾರಿ ಯಾರೆಂದು ಖಚಿತವಾಗಿ ಗೊತ್ತಿಲ್ಲ ಆದರೆ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ವಿಶ್ವಣ್ಣ ಎಂಬುವವರು ಪೂಜಾರಿ ಇದ್ದು ಹಾಗೂ ಸಿದ್ದಪ್ಪ ದೇವಸ್ಥನದ ಪೂಜಾರಿ ಯಾರೆಂದು ಈಗ ನೆನಪಾಗುತ್ತಿಲ್ಲ. ನಾನು ಈ ಮೇಲೆ ಹೇಳಿದ ಎಲ್ಲಾ ದೇವಸ್ಥಾನಗಳ ಜಾತ್ರೆಗಳು ವರ್ಷಕ್ಕೊಮ್ಮೆ ನಡೆಯುತ್ತವೆ.

**13.** ಯತ್ತಪ್ಪ ದೇವಸ್ಥಾನದ ಜಾತ್ರೆ ಕೂಡಾ ವರ್ಷಕ್ಕೊಮ್ಮೆ ನಡೆಯುತ್ತದೆ. ಆ ದೇವಸ್ಥಾನದ ಪೂಜೆಯನ್ನು ಗೊಲ್ಲ ಜನಾಂಗದ ಬುಡಕಟ್ಟಿನವರು ಮಾಡುತ್ತಾರೆ. ಆ ದೇವಸ್ಥಾನದ ಜಾತ್ರೆ **1995** ರಲ್ಲಿ ನಡೆದಾಗ ಗಲಾಟೆಯಾಯಿತು, ಆಗ ಪೊಲೀಸರೇ ನಿಂತು ಆ ಜಾತ್ರೆಯನ್ನು ನಡೆಸಿಕೊಟ್ಟರು ಎಂದರೆ ಅದಕ್ಕೂ ಈ ಕೇಸಿಗೂ ಸಂಬಂಧವಿಲ್ಲ. **2** ಮತ್ತು **3** ನೇ ಪ್ರತಿವಾದಿಯರು ಆ ಗಲಾಟೆಯಲ್ಲಿ ಭಾಗವಹಿಸಿದ್ದರು ಎನ್ನುವುದು ಸರಿಯಲ್ಲ.

14. ದಿನಾಂಕ 26-08-2006 ರಂದು ಮದ್ಯ ರಾತ್ರಿ 12.00 ಗಂಟೆಯ ನಂತರ ನಾನು, 1, 4 ನೇ ಪ್ರತಿವಾದಿಗಳು ಹಾಗೂ ಪಿ.ಎಸ್.ಐ. ಸಮಿವುಲ್ಲಾ ಸೇರಿ 12 ನೇ ವಾದಿ ಹಾಗೂ ಅವರ ತಂದೆ ಪೂಜಾರಿ ನರಸಿಂಹಪ್ಪ ಇವರ ಮನೆಗೆ ಹೋದೆವು ಎನ್ನುವುದು ಸರಿಯಲ್ಲ. ಅಲ್ಲದೇ ಆಗ ನಮ್ಮ ಜೊತೆಗೆ ಮಂಜುನಾಥ ಹಾಗೂ ಟಿ. ಶಿವಪ್ರಸಾದ್ ಕೂಡಾ ಇದ್ದರು ಎನ್ನುವುದು ಸರಿಯಲ್ಲ. ನಾವು ಸದರಿ 12 ನೇ ವಾದಿ ಮತ್ತು ಅವರ ತಂದೆಗೆ ಹೆದರಿಸಿ, ಬೆದರಿಸಿ ಅವರ ಬಳಿ ಇದ್ದಂತಹ ಬಂಗಾರದ ಹಾಗೂ ಬೆಳ್ಳಿಯ ಒಡವೆಗಳನ್ನು ದೋಚಿಕೊಂಡು ಹೋದೆವು ಎನ್ನುವುದು ಸರಿಯಲ್ಲ. ಆ ಕಾಲಕ್ಕೆ ಶ್ರೀನಿವಾಸ್ ಬಿನ್ ತಿಮ್ಮಯ್ಯ (ಪಿಡಬ್ಲ್ಯೂ-3) ಬಂದು ನಮ್ಮನ್ನು ತಡೆದರು ಎನ್ನುವುದು ಸರಿಯಲ್ಲ. ನಾವು ಆ ರೀತಿ ದರೋಡೆ ಮಾಡಿಕೊಂಡು ಹೋದ ಕಾರಣ ಹಿರಿಯೂರಿನ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ನಮ್ಮ ವಿರುದ್ಧ ಪಿಸಿಆರ್ ನಂ.24/2026 ನ್ನು ದಾಖಲಿಸಲಾಗಿದೆ ಎನ್ನುವುದು ಸರಿಯಲ್ಲ. ಸದರಿ ಘಟನೆಗೆ ಸಂಬಂಧಿಸಿದಂತೆ ದಿನಾಂಕ 29-09-2006 ರಂದು ನಿಪಿ-18 ರಂತೆ ಅಬ್ಬಿನಹೊಳೆ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಲಾಗಿತ್ತು ಎಂದರೆ ಆ ದೂರಿನ ವಿಷಯವಾಗಿ ನಮ್ಮನ್ನು ಕರೆಸಿ ವಿಚಾರಣೆ ಮಾಡಿ ಸಂಬಂಧಿಸಿದ ಪೊಲೀಸರು ಕಳುಹಿಸಿಕೊಟ್ಟರು. ಪಿ.ಎಸ್.ಐ.ರವರು ಕ್ರಮ ಕೈಗೊಳ್ಳದೇ ಇದ್ದ ಕಾರಣ ನಿಪಿ-19 ರಂತೆ ದಿನಾಂಕ 06-12-2006 ರಂದು ಸಿಪಿಐ ರವರಿಗೆ ದೂರನ್ನು ಸಲ್ಲಿಸಲಾಯಿತು ಎನ್ನುವುದು ಗೊತ್ತಿಲ್ಲ. ಅಲ್ಲದೇ ಡಿವೈ.ಎಸ್.ಪಿ. ಮತ್ತು ಎಸ್.ಪಿ.ಯವರಿಗೂ ಕೂಡಾ ನಮ್ಮಗಳ ವಿರುದ್ಧ ದೂರು ನೀಡಲಾಗಿದೆ ಎನ್ನುವುದು ಸರಿಯಲ್ಲ. ಮುಂದೆ ದಿನಾಂಕ 23-10-2019 ರಂದು ನಿಪಿ-15(ಎ)ರಂತೆ ವಕೀಲರ ಮೂಲಕ ನೋಟೀಸನ್ನು ನೀಡಲಾಗಿತ್ತು ಎನ್ನುವುದು ನಿಜ. ಅಲ್ಲದೇ ಈ ವಿಚಾರವಾಗಿ ತನಿಖೆ ಕೈಗೊಂಡ ಪೊಲೀಸರು 2 ಮತ್ತು 3 ನೇ ಪ್ರತಿವಾದಿಯರಿಗೆ ರೌಡಿಶೀಟರ್ ಎಂದು ಯಾಕೆ ಪರಿಗಣಿಸಬಾರದು ಎಂದು ನೋಟೀಸ್ ನೀಡಿದ್ದಾರೆ ಎನ್ನುವುದು ಸರಿಯಲ್ಲ.

15. ನನ್ನ ಮುಖ್ಯ ವಿಚಾರಣೆಯ 2 ನೇ ಪುಟದ 3 ನೇ ಕಂಡಿಕೆಯಲ್ಲಿ ದೇವಸ್ಥಾನವು ಪುರಾತನ ದೇವಸ್ಥಾನ ಹಾಗೂ ಅದರ ಕೈಂಕರ್ಯಗಳನ್ನು 12 ಜಾತಿಯ ಕೈವಾಡಸ್ಥರು ಸೇರಿ ನಡೆಸುತ್ತಾರೆಂದು ಹೇಳಿದ್ದಾಗ್ಯೂ ಆ ಕೈವಾಡಸ್ಥರ ಹೆಸರುಗಳನ್ನು ಹೇಳಲು ಸಾಧ್ಯವಾಗುವುದಿಲ್ಲ. ನನ್ನ ಮುಖ್ಯ ವಿಚಾರಣೆಯ 3 ನೇ ಪುಟದ 5 ನೇ ಕಂಡಿಕೆಯಲ್ಲಿ ದೇವಸ್ಥಾನ ಶಿಥಿಲಗೊಂಡಿದೆ ಎಂಬ ಕಾರಣಕ್ಕಾಗಿ ಅದರ ಜೀರ್ಣೋದ್ಧಾರ ಕುರಿತು ಗ್ರಾಮಸ್ಥರು ಮತ್ತು ಕಮಿಟಿ ಸದಸ್ಯರು ತೀರ್ಮಾನಿಸಿದ ಬಗ್ಗೆ ಗೊತ್ತುವಳಿಯ ಪ್ರತಿಯನ್ನು ಕೇಸಿನಲ್ಲಿ ಹಾಜರುಪಡಿಸಿದ್ದೇನೆ. ನಾವು ಅಂತಹ ಯಾವುದೇ ಗೊತ್ತುವಳಿಯ ಪ್ರತಿಯನ್ನು ಹಾಜರುಪಡಿಸಿಲ್ಲ ಮತ್ತು ನಾವುಗಳು ಸೇರಿ ಮೀಟಿಂಗನ್ನು ಮಾಡಿಲ್ಲ ಎನ್ನುವುದು ಸರಿಯಲ್ಲ. ಆ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ನಾವು ಡಿವೈ.ಎಸ್.ಪಿ., ಪಂಚಾಯಿತಿ ಇಲಾಖೆ, ತಹಶೀಲ್ದಾರ್ ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ ಇವರಿಂದ ಅನುಮತಿಯನ್ನು ಪಡೆದುಕೊಂಡಿದ್ದೇವೆ. ಆ ಅನುಮತಿಯ ದಾಖಲೆಗಳನ್ನು ಕೇಸಿನಲ್ಲಿ ಹಾಜರುಪಡಿಸಿದ್ದೇವೆ. ದಾರ್ಮಿಕ ದತ್ತಿ ಹಾಗೂ ಮುಜರಾಯಿ ಇಲಾಖೆಯಿಂದ ಆ ದೇವಸ್ಥಾನದ ಜೀರ್ಣೋದ್ಧಾರಕ್ಕೆ ನಾವು ಅನುಮತಿ

ಪಡೆದಿಲ್ಲ. ಸದರಿ ಇಲಾಖೆಗೆ ನಾವು ದೇವಸ್ಥಾನದ ಜೀರ್ಣೋದ್ಧಾರದ ಪ್ಲಾನನ್ನು ನೀಡಿಲ್ಲ. ಓರ್ವ ಖಾಸಗಿ ಇಂಜಿನಿಯರ್ ಇವರಿಂದ ನಾವು ಆ ಪ್ಲಾನನ್ನು ತಯಾರಿಸಿಕೊಂಡಿದ್ದೆವು. ಆ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ನಾವು ಟೆಂಡರನ್ನು ಕರೆದಿರಲಿಲ್ಲ.

**16**. ಮುಜಾರಾಯಿ ಇಲಾಖೆಯವರು ಮೇಜರ್ ಮುಜರಾಯಿ ದೇವಸ್ಥಾನ ಮತ್ತು ಮೈನರ್ ದೇವಸ್ಥಾನ ಎಂದು ವರ್ಗೀಕರಣ ಮಾಡಿ ಪಟ್ಟಿ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಆ ಎರಡು ವರ್ಗೀಕರಣಗಳನ್ನು ಹೊರತುಪಡಿಸಿ ಮುಜರಾಯಿ ಇಲಾಖೆಯವರು ರಾಜ್ಯಾದ್ಯಂತ ಇರುವ ಇನ್ನುಳಿದ ದೇವಸ್ಥಾನಗಳನ್ನು ವಿಲೇಜ್ ಇನ್ಸಿಟ್ಯೂಷನ್ ಎಂದು ವರ್ಗೀಕರಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಆ ಇನ್ನುಳಿದ ದೇವಸ್ಥಾನಗಳಿಗೆ ಸಂಬಂಧಿಸಿದಂತೆ ದಾರ್ಮಿಕ ದತ್ತಿ ಇಲಾಖೆಯ ಆಯುಕ್ತರು ಅಥವಾ ಆಯಾ ತಾಲ್ಲೂಕಿನ ತಹಶೀಲ್ದಾರ್ ರವರನ್ನು ಮುಜರಾಯಿ ಅಧಿಕಾರಿಯಾಗಿ ನೇಮಕ ಮಾಡಲಾಗಿದ್ದು ಯಾವುದೇ ಕಾರ್ಯಕ್ರಮಗಳನ್ನು ಆ ದೇವಸ್ಥಾನಗಳಿಗೆ ಸಂಬಂಧಿಸಿದಂತೆ ಮಾಡಬೇಕಾದಲ್ಲಿ ಸದರಿ ಆಯುಕ್ತರ ಅನುಮತಿ ಪಡೆಯಬೇಕು ಎನ್ನುವುದು ಗೊತ್ತಿಲ್ಲ. ಪುರಾತನ ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡಲು ಬರುವುದಿಲ್ಲ ಎಂದರೆ ವೇಣುಕಲ್ಲುಗುಡ್ಡದ ದೇವಸ್ಥಾನ ತುಂಬಾ ಶಿಥಿಲವಾಗಿದ್ದರಿಂದ ನಾವು ಜೀರ್ಣೋದ್ಧಾರ ಮಾಡಿದ್ದೇವೆ. ನಾವು ಹಾಜರುಪಡಿಸಿರುವಂತಹ ನಿಡಿ–**40** ರಲ್ಲಿ ಬತೇರಿ ಹಾಗೂ ವೇಣುಕಲ್ಲುಗುಡ್ಡ ಕಂಡುಬರುತ್ತವೆ ಎನ್ನುವುದು ನಿಜ. ಬತೇರಿಯ ಭಾಗವನ್ನು ನಿಡಿ–**40**(ಎ) ಎಂದು ಗುರುತಿಸಲಾಯಿತು. ಆ ಗುಡ್ಡದ ಮೇಲೆ ಪುರಾತನ ಹಾಗೂ ಚಾರಿತ್ರಿಕ ಕುರುಹುಗಳು ಕೂಡಾ ಇವೆ ಎನ್ನುವುದು ನಿಜ. ಆ ಚಾರಿತ್ರಿಕ ಕುರುಹುಗಳನ್ನು ಯಾರೂ ಬದಲಿಸುವಂತಿಲ್ಲ ಮತ್ತು ಅವುಗಳಿಗೆ ದಕ್ಕೆ ಮಾಡುವಂತಿಲ್ಲ ಎಂದರೆ ನಾವು ಅಂತಹ ಯಾವುದೇ ಕ್ರಮವನ್ನು ಕೈಗೊಂಡಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ.ಹೆ.ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ